# St. Claret College

Roll No:
Date:

**Autonomous, Bengaluru**

**UG END SEMESTER EXAMINATION-NOVEMBER 2025**

**BCA/BSC, I SEMESTER**

**KAS 124, GANAKA-VIJNANA KANNADA-1**

**TIME: 3:00 hours.** 2 **MAX.MARKS:80**

**This paper contains three printed pages and A to I parts**

**Instructions:**

1. **Verify and ensure that the question paper is completely printed.**
2. **Any discrepancies or questions about the exam paper must be reported to the COE within 1 hour after the examination.**
3. **Students must check the course title and course code before answering the questions.**

## PART-A

ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ. **1x6=6**

1. ಕೊಟ್ಟಕುದುರೆಯನೇರಲರಿಯದೆ
   ಮತ್ತೊಂದು ಕುದುರೆಯ ಬಯಸುವರು
   ವೀರರೂ ಅಲ್ಲ! ಧೀರರೂ ಅಲ್ಲ!!
   ಇದು ಕಾರಣ
   ನೆರೆ ಮೂರು ಲೋಕವೆಲ್ಲವೂ
   ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ
   ಗುಹೇಶ್ವರನೆಂಬ ಲಿಂಗವನವರೆತ್ತಬಲ್ಲರೋ?

ST. CLARET COLLEGE
LIBRARY
Bengaluru-13
AUTONOMOUS

2. ಮಾರುದ್ದದ ಪೈರಾಗಲಿ ಮೊಳದುದ್ದದ ತೆನೆಯಾಗಲಿ
   ಬಡವನ ಮನೆಗೆ ಸಿರಿಬರಲಿ ಭೂಮಿತಾಯಿ
   ಕಂದಯ್ನ ಹಸಿವು ಇಂಗೋಗ್ಲಿ
   ಭೂಮಿತಾಯಿ ಬಸುರಾಗಿ ಹಸುರುಡುಗೆ ಉಟ್ಕೊಂಡು
   ಮೊಸರು ಅನ್ನಕ್ಕೆ ಭ್ರಮಿಸಾಳೆ

## PART-B

ಎರಡಕ್ಕೆ ಟಿಪ್ಪಣಿ ಬರೆಯಿರಿ. **2x2=4**

3. ಕುವೆಂಪು
4. ದ.ರಾ. ಬೇಂದ್ರೆ
5. ಜನಪದ ಕಾವ್ಯ
6. ಬಸವಣ್ಣ

## PART-C

ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ: **4x5=20**

7. ಕುವೆಂಪು ಅವರು ಯಾವ ರೀತಿಯ ದೀಕ್ಷೆಯನ್ನು ಕೊಡುತ್ತಾರೆ.
8. ಜನಪದರು ಏಳುತಲೆ ಯಾರ್‍ಯಾರನ್ನು ನೆನೆಯುತ್ತಾರೆ.
9. ಪಾಹಂ ಕಂಡ ಕನಸನ್ನು ವಿಶ್ಲೇಷಿಸಿ
10. ಕಾಳಿಂಗಯ್ಯ ಮತ್ತು ದೇವಪ್ಪನ ವ್ಯಕ್ತಿತ್ವಗಳನ್ನು ಪರಿಚಯಿಸಿ

11. ಕಂಪ್ಯೂಟರ್ ಬಳಕೆಯಲ್ಲಿ ಕನ್ನಡ ಭಾಷೆಯ ಮಹತ್ವವನ್ನು ತಿಳಿಸಿ
12. ಬಸವಣ್ಣ ಹೇಳುವ ದೇವರ ಕಲ್ಪನೆ ಎಂಥದ್ದು?

## PART-D

**ಮೂರು ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿ : 3x10=30**

13. ಭಾರತದಲ್ಲಿ ಶಿಕ್ಷಣ ಪದ್ಧತಿ ಪ್ರಾರಂಭವಾದ ಬಗೆಯನ್ನು ಕುರಿತು ಬರೆಯಿರಿ
14. "ಪರರ ಸ್ವತ್ತು ಪಾಷಾಣಕ್ಕೆ ಸಮ"-ಈ ಹೇಳಿಕೆಯನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.
15. ವೈಚಾರಿಕ ಪ್ರಜ್ಞೆಗೆ ಅಡ್ಡಿಯಾಗುವ ಅಂಶಗಳಾವುವು? ವಿವರಿಸಿ
16. ಸಾಮಾಜಿಕ ಬದಲಾವಣೆಗೆ ವಿಜ್ಞಾನ-ಸಾಹಿತ್ಯದ ಕೊಡುಗೆಗಳೇನು? ವಿವರಿಸಿ.
17. ಮಾಧ್ಯಮಗಳಿಗಿಂತಲೂ ಸಾಮಾಜಿಕ ಜಾಲತಾಣಗಳು ಶಕ್ತಿಯುತವಾಗಿವೆಯೇ? ನಿಮ್ಮ ಮಾತುಗಳಲ್ಲಿ ಬರೆಯಿರಿ.

## PART-E

**18. ಈ ಪಠ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆಯಿರಿ. 1x5=5**

ಒಂದು ಕಾಡಿನ ನಿವಾಸಿಗಳಾಗಿದ ಕಪ್ಪೆಗಳಲಿ ಕೆಲವು ಒಂದು ದಿನ ಆಹಾರ ಹುಡುಕಿಕೊಂಡು ಕುಪ್ಪಳಿಸುತ್ತ ಗುಂಪಾಗಿ ಹೋಗುತ್ತಿದ್ದವು. ಅವುಗಳಲ್ಲಿ ಎರಡು ಆಯ ತಪ್ಪ ದಾರಿಯಲ್ಲಿದ್ದ ಹಳ್ಳವೊಂದಕ್ಕೆ ಬಿದ್ದು ಬಿಟ್ಟವು. ಮಿಕ್ಕ ಕಪ್ಪೆಗಳು ಹಳ್ಳದ ಸುತ್ತ ಗುಂಪು ಕೂಡಿದವು. ಇಣುಕಿ ನೋಡಿದವು. ಹಳ್ಳವು ಆಳವಾಗಿತ್ತು. ಒಳಗೆ ಬಿದ್ದ ನತದೃಷ್ಟ ಕಪ್ಪೆಗಳನ್ನು ಕುರಿತು, "ಇಷ್ಟು ಆಳದ ಹಳ್ಳದಿಂದ ಹೇಗೆ ಮೇಲಕ್ಕೆ ಬರುತ್ತೀರಿ? ನಿಮ್ಮ ಕತೆ ಮುಗೀತು" ಎಂದು ಒಕ್ಕೊರಲಿನಿಂದ ವಟಗುಟ್ಟಿದವು. ಒಳಗೆ ಬಿದ್ದ ಕಪ್ಪೆಗಳು ಪ್ರಾಣ ಉಳಿಸಿಕೊಳ್ಳಲು ಜಿಗಿದಾಡಿದಂತೆಲ್ಲ, ಹಳ್ಳದ ಮೇಲೆ ಸುತ್ತುವರೆದು ಕುಳಿತಿದ್ದ ಕಪ್ಪೆಗಳು, "ನೀವು ಮೇಲೆ ಬರುವುದು ಸಾಧ್ಯವೇ ಇಲ್ಲ. ಸುಮ್ಮನೇ ಯಾಕೆ ಎಗರಾಡಿ ಮೈ ನೋಯಿಸಿಕೊಳ್ಳುತ್ತೀರಿ. ನೀವು ಸತ್ತಂತೆಯೇ ಸರಿ. ವ್ಯರ್ಥ ಪ್ರಯತ್ನ" ಎಂದು ಮತ್ತೆ ಮತ್ತೆ ವಟಗುಟ್ಟುತ್ತಲೇ ಇದ್ದವು. ಹಳ್ಳದ ಮೇಲಿನಿಂದ ಕಪ್ಪೆಗಳು ಸಾಮೂಹಿಕವಾಗಿ ಪದೇ ಪದೇ ವಟಗುಟ್ಟುತ್ತ ಹಳ್ಳದೊಳಗಿನ ಕಪ್ಪೆಗಳ ಪ್ರಯತ್ನವನ್ನು ನಿರುತ್ಸಾಹಗೊಳಿಸುತ್ತಿದ್ದವು. ತಳದಲ್ಲಿ ಜಿಗಿದಾಡುತ್ತಿದ್ದ ಒಂದು ಕಪ್ಪೆಯು ತಾನು ಹೋರಾಡಿ ಪಾರಾಗಬಲ್ಲೆ ಎನ್ನುವ ಅಂತಃ ಸ್ಥೈರ್ಯವನ್ನೇ ಕಳೆದುಕೊಂಡಿತು. ಮೃತ್ಯುಕೂಪದಿಂದ ಹೊರ ಬರಲಾರೆ ಎನಿಸಿ ಎದೆ ಹಾರಿ ಅಸುನೀಗಿತು.

ಇನ್ನೂ ಜೀವಂತವಾಗಿದ್ದ ಕಪ್ಪೆಯು ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿತ್ತು. ಕಪ್ಪೆಗಳು ಮೇಲಿನಿಂದ "ನಿನ್ನ ಕತೆಯೂ ಅಷ್ಟೇ" ಎಂದು ನಿರಾಶಾವಾದದ ಬಲೆಯನ್ನು ನೇಯುತ್ತಿದ್ದವು. "ಜಿಗಿದಷ್ಟೂ ಮೈ ನೋಯಿಸಿಕೊಳ್ಳುತ್ತೀ, ಅಷ್ಟೇ. ನೋವುಂಡು ಸಾಯುವ ಬದಲು ನಿನ್ನ ಸ್ನೇಹಿತನಂತೆ ನೋವಿಲ್ಲದ ಸಾವನ್ನು ಒಪ್ಪಿಕೊಳ್ಳುವುದೇ ಮೇಲು ಎಂದು ಅದೆಷ್ಟು ಸಲ ಹೇಳಿದವೋ! ಆದರೆ ಆ ಕಪ್ಪೆಯು ಮತ್ತಷ್ಟು ಶಕ್ತಿ ಕೂಡಿಸಿಕೊಂಡು ಪ್ರಯತ್ನವನ್ನು ಮುಂದುವರೆಸಿ ಹಳ್ಳದ ದಡ ಸೇರಿ ಬಚಾವಾಯಿತು. ಮೇಲಕ್ಕೆ ಬಂದ ಕಪೆಯನ್ನು ಮಿಕ್ಕ ಕಪ್ಪೆಗಳು ಸುತ್ತುವರೆದವು. ತಮ್ಮ ಮಾತುಗಳಿಗೆ ಲಕ್ಷ್ಯಕೊಡದೆ ಕೊನೆಗೂ ಸಾವಿನ ದವಡೆಯಿಂದ ಪಾರಾಗಿ ಬಂದ ಆ ಕಪ್ಪೆಯನ್ನು ಕುರಿತು, "ಎಷ್ಟು ಪ್ರಯತ್ನಿಸಿದರೂ ನೀನು ಬದುಕಲಾರೆ ಎಂದು ನಾವು ಹೇಳುತ್ತಿದ್ದೆವು. ನಿನಗೆ ಕೇಳಿಸುತ್ತಿರಲಿಲ್ಲವೇ?" ಎಂದು ಎಂದು ಕೇಳಿದವು. ಆ ಕಪ್ಪೆಯು ನಿಟ್ಟುಸಿರು ಬಿಡುತ್ತಾ "ಎಲ್ಲರೂ ಸೇರಿ

ಏನೋ ವಟಗುಟ್ಟುತ್ತಿದ್ದೀರಿ ಅನ್ನಿಸುತ್ತಿತ್ತು. ನನಗೆ ಕಿವಿ ಕೇಳಿಸುವುದಿಲ್ಲ. ಬಹುಶಃ ಪ್ರಯತ್ನವನ್ನು ಬಿಡದೆ ಮುಂದುವರಿಸುವಂತೆ ನನ್ನಲ್ಲಿ ಉತ್ಸಾಹ ತುಂಬುತ್ತಿದ್ದೀರಿ ಎಂದು ಕೊಂಡು ಪ್ರಯತ್ನವನ್ನು ಮುಂದುವರಿಸಿದೆ. ಧನ್ಯವಾದಗಳು" ಎಂದು ಹೇಳಿ ಮುಂದಕ್ಕೆ ಕುಪ್ಪಳಿಸಿತು. ಅವಾಕ್ಕಾದ ಮಿಕ್ಕ ಕಪ್ಪೆಗಳು ಅದನ್ನು ಹಿಂಬಾಲಿಸಿದವು. (ಒಟ್ಟು ಪದಗಳು–207)

## PART-F

19. ಅಂಕಪಟ್ಟಿಯಲ್ಲಿನ ತಪ್ಪಾಗಿ ಮುದ್ರಿಸಿರುವ ಹೆಸರಿನ ದೋಷಗಳನ್ನು ಸರಿಪಡಿಸುವಂತೆ ಕೋರಿ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಿಗೆ ಅರ್ಜಿ ಬರೆಯಿರಿ **1x4=4**

## PART-G

ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. **4x1=4**

20. ಹೊನ್ನಗಂಬ
21. ಮಜ್ಜನ
22. ವರ್ತಕ
23. ಹಲ್ಲಣ
24. ಇಳೆ

## PART-H

ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ಬರೆಯಿರಿ. **2x1=2**

25. ಮೂಢನಂಬಿಕೆ
26. ಸಹಬಾಳ್ವೆ
27. ಹೊಂದಾಣಿಕೆ
28. ಚಿಂತನೆ

## PART-I

ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ **5x1=5**

29. ಅಕ್ಕಮಹಾದೇವಿಯ ವಚನಾಂಕಿತ?
    ಅ) ಗುಹೇಶ್ವರ ಆ) ಚೆನ್ನಮಲ್ಲಿಕಾರ್ಜುನ
    ಇ) ರಾಮನಾಥ ಈ) ಕೂಡಲ ಸಂಗಮದೇವ
30. ಮೈಸೂರು ರಾಜ್ಯವನ್ನು "ಕರ್ನಾಟಕ" ಎಂದು ಪುನರ್ ನಾಮಕರಣ ಮಾಡಿದವರು?
    ಅ) ಡಿ. ದೇವರಾಜು ಅರಸು ಆ) ಬಸವರಾಜು ಅರಸು
    ಇ) ನಂಜರಾಜ ಅರಸು ಈ) ಕಾಂತರಾಜ ಅರಸು
31. ವಿಜ್ಞಾನ ಮತ್ತು ಅಂಧಶ್ರದ್ದೆ ಪಠ್ಯದ ಲೇಖಕರು?
    ಅ) ಕುವೆಂಪು ಆ) ಶಿವರಾಮ ಕಾರಂತ
    ಇ) ಚಂದ್ರಶೇಖರ ಕಂಬಾರ ಇ) ಕೆ. ಎಸ್. ನಿಸಾರ್ ಅಹಮ್ಮದ್
32. ರೇಡಿಯೋ ಕಂಡುಹಿಡಿದವರು?
    ಅ) ಐಸಾಕ್ ನ್ಯೂಟನ್ ಆ) ವಾರನ್ ಹೆಸ್ಟಿಂಗ್
    ಇ) ಡಾರ್ವಿನ್ ಈ) ಮಾರ್ಕೋನಿ
33. ಭೂಮಿ ದುಂಡಾಗಿದೆ ಎಂದು ಹೇಳಿದ ಪುರಾತನ ವಿಜ್ಞಾನಿ?
    ಅ) ಹಿರೋಡಾಟಸ್ ಆ) ಆರ್ಕಿಮಿಡಿಸ್
    ಇ) ನ್ಯೂಟನ್ ಈ) ಮೇರಿಕ್ಯೂರಿ

****